ಉದಯವಾಣಿ

**Dtd- Friday, 20th, October- 2018**

**Page No.03**

# ಅರಸು ವೈದ್ಯಕೀಯ ಸಂಸ್ಥೆಗೆ ಸಂಪೂರ್ಣ ಸಹಕಾರ

## ವೈದ್ಯಕೀಯ ಶಿಕ್ಷಣ ಸಚಿವ ಡಿ.ಕೆ.ಶಿವಕುಮಾರ್ ಅಭಯ । ಅತ್ಯಾಧುನಿಕ ಐಸಿಯು, ಶಸ್ತ್ರ ಚಿಕಿತ್ಸಾ ಘಟಕಗಳ ಉದ್ಘಾಟನೆ

**ಕೋಲಾರ:** ದೇವರಾಜ ಅರಸು ಅವರ ಆಶಯದಂತೆ ಗ್ರಾಮೀಣ ಜನರ ವೈದ್ಯಕೀಯ ಸೇವೆಗಾಗಿ ಅತ್ಯಾಧುನಿಕ ಸೌಲಭ್ಯಗಳ ಜಾಲಪ್ಪ ಆಸ್ಪತ್ರೆ ನಿರ್ಮಿಸಿರುವ ದೇವರಾಜ ಅರಸು ವೈದ್ಯಕೀಯ ಸಂಸ್ಥೆಗೆ ತಾವು ಹಾಗೂ ಸರಕಾರ ಅಗತ್ಯ ಸಹಕಾರ ನೀಡುವುದಾಗಿ ವೈದ್ಯಕೀಯ ಶಿಕ್ಷಣ ಸಚಿವ ಡಿ.ಕೆ.ಶಿವಕುಮಾರ್ ಹೇಳಿದರು.

ನಗರದ ಹೊರವಲಯದ ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಶುಕ್ರವಾರ ಆಸ್ಪತ್ರೆ ಸಂಸ್ಥಾಪಕ ಆರ್.ಎಲ್. ಜಾಲಪ್ಪರ ಜನ್ಮದಿನದ ಅಂಗವಾಗಿ ಆಸ್ಪತ್ರೆಯಲ್ಲಿ ಸುಮಾರು 45 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ತೀವ್ರ ನಿಗಾ ಘಟಕ ಹಾಗೂ ಆಧುನಿಕ ಶಸ್ತ್ರ ಚಿಕಿತ್ಸಾ ಕೊಠಡಿಗಳನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

**ರಾಜ್ಯದಲ್ಲಿ 57 ಕಾಲೇಜು:** ದೇಶದಲ್ಲಿ 590 ವೈದ್ಯಕೀಯ ಸಂಸ್ಥೆಗಳಿದ್ದು, ರಾಜ್ಯದಲ್ಲಿ 57 ಕಾಲೇಜುಗಳಿವೆ. ಆದರೆ, ತಾವು ಸಚಿವರಾಗಿ ಕಾರ್ಯಒತ್ತಡದಿಂದ ಪ್ರತಿ ಕಾಲೇಜಿಗೂ ಭೇಟಿ ನೀಡಲು ಸಾಧ್ಯವಾಗುತ್ತಿಲ್ಲ, ಜಾಲಪ್ಪನವರು ಮುದ್ದು ಆಸಕ್ತಿಯಿಂದ ಸುಮಾರು 85 ಎಕರೆ ಪ್ರದೇಶದಲ್ಲಿ ವೈದ್ಯಕೀಯ ಸಂಸ್ಥೆಯ ಕ್ಯಾಂಪಸ್ ನಿರ್ಮಾಣ ಮಾಡಿ ಕೋಲಾರ ಜಿಲ್ಲೆಯ ಆಸ್ತಿಯಾಗಿ ಪರಿವರ್ತಿಸಿದ್ದಾರೆಂದು ಹೇಳಿದರು.

**ದೇಶ, ವಿದೇಶಗಳಲ್ಲೂ ಕೀರ್ತಿ:** ವೈದ್ಯಕೀಯ ಮಂಡಳಿ ನಿಯಮಾವಳಿಗಳಿಗೂ ಮೀರಿದ ಅತ್ಯಾಧುನಿಕ ವೈದ್ಯಕೀಯ ಸೌಲಭ್ಯಗಳನ್ನು ಜಾಲಪ್ಪ ಆಸ್ಪತ್ರೆ ಹೊಂದಿದ್ದು, ಆರೋಗ್ಯದ ಸೇವೆಯಲ್ಲಿ ದೇಶ, ವಿದೇಶಗಳಲ್ಲೂ ಕೀರ್ತಿ ಸಂಪಾದಿಸಿರುವುದು ಶ್ಲಾಘನೀಯ ಎಂದರು.

**ಜಾಲಪ್ಪರ ಸಾಧನೆಗೆ ಸಾಕ್ಷಿ:** ಹುಟ್ಟು ಉಚಿತ ಸಾವು ಖಚಿತ. ಇದರ ಮಧ್ಯೆ ಏನು ಸಾಧಿಸಿದ್ದೇವೆ. ಅವಕಾಶ ಸಿಕ್ಕಾಗ ಏನು ಮಾಡಿದ್ದೇವೆ ಎನ್ನುವುದು ಮುಖ್ಯವಾಗಿರುತ್ತದೆ ಎನ್ನುವುದನ್ನು ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯ ಸಂಸ್ಥೆ, ಜಾಲಪ್ಪರ ಸಾಧನೆಯನ್ನು ತೋರಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ತಮ್ಮ ನಂತರವೂ ಜಾಲಪ್ಪನವರು ದೇವರಾಜ ಅರಸು ಸಂಸ್ಥೆ ಜನಸೇವೆಯ ಮೂಲಕ ಜನಮಾನಸದಲ್ಲಿ ಚಿರಸ್ಥಾಯಿಯಾಗಿರುತ್ತಾರೆಂದ ಅವರು, ವೈದ್ಯರನ್ನು ರೂಪಿಸುವುದರ ಜೊತೆಗೆ ಗ್ರಾಮೀಣ ಭಾಗದ ಜನತೆಗೆ ಆರೋಗ್ಯ ಸೇವೆ ನೀಡುತ್ತಿರುವ ಜಾಲಪ್ಪರ ಸಂಸ್ಥೆಗೆ ಕೋಟಿ ನಮನ ಸಲ್ಲಿಸುವುದಾಗಿ ತಿಳಿಸಿದರು.

ಸಾಮಾನ್ಯವಾಗಿ ವೈದ್ಯರು ಗ್ರಾಮೀಣ ಭಾಗದ ಆಸ್ಪತ್ರೆಗಳಲ್ಲಿ ಬಂದು ಸೇವೆ ಸಲ್ಲಿಸಲು ಹಿಂಜರಿಯುತ್ತಾರೆ, ಆದರೆ, ಕೋಲಾರದ ಜಾಲಪ್ಪ ಆಸ್ಪತ್ರೆಯಲ್ಲಿರುವ ಸೌಲಭ್ಯಗಳ ಕಾರಣದಿಂದಾಗಿ ತಜ್ಞ ಪರಿಣತ ವೈದ್ಯರು ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

**ಜಾಲಪ್ಪ ಆಸ್ಪತ್ರೆಯ ಹೆಗ್ಗಳಿಕೆ:** ಸಂಸದ ಕೆ.ಎಚ್.ಮುನಿಯಪ್ಪ ಮಾತನಾಡಿ, ವೈದ್ಯಕೀಯ ಮಹಾವಿದ್ಯಾಲಯ ಸ್ಥಾಪಿಸಲು ಸುಮಾರು 200 ಕೋಟಿ ರೂ.ಗೂ ಅಧಿಕ ಬಂಡವಾಳದ ಅಗತ್ಯವಿದೆ. ಇಷ್ಟು ದೊಡ್ಡ ಮೊತ್ತದ ಬಂಡವಾಳವನ್ನು ಕೋಲಾರ ನಗರದಲ್ಲಿ ಹೂಡಿಯೂ ಬಡವರಿಗೆ ಸುಲಭದ ದರದಲ್ಲಿ ವೈದ್ಯಕೀಯ ಚಿಕಿತ್ಸೆ ನೀಡುತ್ತಿರುವುದು ಜಾಲಪ್ಪ ಆಸ್ಪತ್ರೆಯ ಹೆಗ್ಗಳಿಕೆಯಾಗಿದೆ. ಜೊತೆಗೆ ದೇಶ, ವಿದೇಶಗಳಿಗೆ ಅತ್ಯುತ್ತಮ ವೈದ್ಯರನ್ನು ರೂಪಿಸಿ ಕೊಡುಗೆಯಾಗಿ ನೀಡುತ್ತಿದೆ. ಕೇಂದ್ರ ಸರಕಾರ ವೈದ್ಯಕೀಯ ಮಹಾ ವಿದ್ಯಾಲಯಗಳಿಗೆ ತೊಂದರೆ ನೀಡುವ ಕಾನೂನುಗಳನ್ನು ಜಾರಿಗೊಳಿಸುತ್ತಿದೆ. ರಾಜ್ಯ ವೈದ್ಯಕೀಯ ಸಚಿವ ಡಿ.ಕೆ.ಶಿವಕುಮಾರ್ ಈ ಕುರಿತು ಗಮನ ಹರಿಸಬೇಕೆಂದು ಸಲಹೆ ನೀಡಿದರು.

ಶಾಸಕ ಕೆ.ಶ್ರೀನಿವಾಸಗೌಡ ಮಾತನಾಡಿ, ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯ ಸ್ಥಾಪನೆಯ ಆರಂಭದ ದಿನಗಳಲ್ಲಿ ಜಾಗ ಹುಡುಕಾಟ ನಡೆಸಿದ ಸಂದರ್ಭದಲ್ಲಿ ತಾವು ಎರಡು ಮೂರು ಕಡೆ ಜಾಗ ತೋರಿಸಿ, ಕಡೆಗೆ ಈಗ ಸಂಸ್ಥೆ ಇರುವ ಜಾಗವನ್ನು ಅಂತಿಮಗೊಳಿಸಿದ್ದಾಗಿ ನೆನಪಿಸಿಕೊಂಡರು.

ಸಂಸ್ಥೆಯ ಸಂಸ್ಥಾಪಕ ಆರ್.ಎಲ್.ಜಾಲಪ್ಪ, ಕುಲಾಧಿಪತಿ ಡಾ.ಎಸ್.ಕುಮಾರ್, ಕಾರ್ಯದರ್ಶಿ ಜಿ.ಎಚ್.ನಾಗರಾಜ್, ಸಂಸ್ಥೆಯ ನಿರ್ದೇಶಕ ಜೆ.ರಾಜೇಂದ್ರ, ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಲಕ್ಷ್ಮಯ್ಯ, ರಿಜಿಸ್ಟ್ರಾರ್ ಡಾ.ಎ.ವಿ.ಎಂ.ಕುಟ್ಟಿ, ಪ್ರಾಂಶುಪಾಲ ಡಾ.ಬಿ.ಎಲ್.ಹರೇಂದ್ರಕುಮಾರ್, ನಾರಾಯಣ ಹೃದಯಾಲಯದ ಡಾ.ಸುನೀಲ್ ಕಾರಂತ್, ಮಣಿಪಾಲ್ ಆಸ್ಪತ್ರೆಯ ಡಾ.ಉಮೇಶ್ ಜಲಿಹಾಲ್ ಇತರರು ಉಪಸ್ಥಿತರಿದ್ದರು.



**ಕೋಲಾರ ನಗರದ ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ನಿರ್ಮಿಸಿರುವ ಅತ್ಯಾಧುನಿಕ ಐಸಿಯು, ಶಸ್ತ್ರಚಿಕಿತ್ಸಾ ಘಟಕಗಳನ್ನು ವೈದ್ಯಕೀಯ ಸಚಿವ ಡಿ.ಕೆ.ಶಿವಕುಮಾರ್ ಉದ್ಘಾಟಿಸಿದರು.**

> **ಕರ್ನಾಟಕ ರಾಜ್ಯ ಐಟಿ-ಬಿಟಿ, ವೈದ್ಯಕೀಯ, ತಂತ್ರಜ್ಞಾನ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದೆ. ದೇಶ, ವಿದೇಶಗಳಿಂದ ಆಗಮಿಸುವ ಅತಿಥಿಗಳು ಮೊದಲಿಗೆ ಕರ್ನಾಟಕಕ್ಕೆ ಭೇಟಿ ನೀಡುತ್ತಿದ್ದಾರೆ ಎನ್ನುವುದನ್ನು ಅಮೆರಿಕದ ಹಿಂದಿನ ಅಧ್ಯಕ್ಷ ಒಬಾಮಾ ಅವರೇ ದೃಢಪಡಿಸಿರುವುದು ಕರ್ನಾಟಕದ ಹಿರಿಮೆ.**
>
> **• ಡಿ.ಕೆ.ಶಿವಕುಮಾರ, ವೈದ್ಯಕೀಯ ಶಿಕ್ಷಣ ಸಚಿವ**

ಕೇಂದ್ರ ಸರ್ಕಾರಕ್ಕೆ ವೈದ್ಯಕೀಯ ಶಿಕ್ಷಣ ಸಚಿವ ಡಿ.ಕೆ.ಶಿವಕುಮಾರ್ ಒತ್ತಾಯ

# ವೈದ್ಯಕೀಯ ಕಾಲೇಜುಗಳ ನಿರ್ಬಂಧ ಸಡಿಲಿಸಲಿ





ದೇವರಾಜ ಅರಸು ವೈದ್ಯಕೀಯ ಕಾಲೇಜಿನಲ್ಲಿ ಶುಕ್ರವಾರ ತೀವ್ರ ನಿಗಾ ಘಟಕ ಉದ್ಘಾಟಿಸಿದ ವೈದ್ಯಕೀಯ ಶಿಕ್ಷಣ ಸಚಿವ ಡಿ.ಕೆ.ಶಿವಕುಮಾರ್ ಘಟಕದ ಬಗ್ಗೆ ತಜ್ಞರಿಂದ ಮಾಹಿತಿ ಪಡೆದರು (ಎಡಚಿತ್ರ). ವೈದ್ಯರು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು

ಪ್ರಜಾವಾಣಿ ವಾರ್ತೆ

**ಕೋಲಾರ:** 'ವೈದ್ಯಕೀಯ ಕಾಲೇಜು ನಡೆಸಲು ಕೇಂದ್ರ ಸರ್ಕಾರ ವಿಧಿಸಿರುವ ನಿರ್ಬಂಧಗಳನ್ನು ಸಡಿಲಗೊಳಿಸಬೇಕು' ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಿ.ಕೆ. ಶಿವಕುಮಾರ್ ಒತ್ತಾಯಿಸಿದರು.

ಇಲ್ಲಿನ ದೇವರಾಜ ಅರಸು ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಆವರಣದಲ್ಲಿ ಶುಕ್ರವಾರ ತೀವ್ರ ನಿಗಾ ಘಟಕ ಹಾಗೂ ಶಸ್ತ್ರಚಿಕಿತ್ಸಾ ಕೊಠಡಿ ಉದ್ಘಾಟಿಸಿ ಮಾತನಾಡಿ, 'ಭಾರತೀಯ ವೈದ್ಯಕೀಯ ಮಂಡಳಿ (ಎಂಸಿಐ) ನಿಯಮಾವಳಿ ಅನುಸಾರ ವೈದ್ಯಕೀಯ ಕಾಲೇಜು ನಡೆಸೋದು ಕಷ್ಟ' ಎಂದು ಅಭಿಪ್ರಾಯಪಟ್ಟರು.

'ವೈದ್ಯಕೀಯ ಕಾಲೇಜು ನಡೆಸಲು ಬೆಂಗಳೂರಿನಲ್ಲಿ 10 ಎಕರೆ ಜಮೀನು ಸಾಕು ಎಂದು ಎಂಸಿಐ ಸದಸ್ಯರು ಹೇಳಿದ್ದಾರೆ. ಅವರಿಗೆ ಇಷ್ಟ ಬಂದಂತೆ ನಿಯಮಾವಳಿ ರೂಪಿಸಿ ಜಾರಿಗೆ ತಂದಿದ್ದಾರೆ. ಇದರಿಂದ ಆಡಳಿತ ಮಂಡಳಿಗಳಿಗೆ ಕಾಲೇಜು ನಡೆಸುವುದು ತುಂಬಾ ಕಷ್ಟವಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಜಾಲಪ್ಪ, ಸಿದ್ದರಾಮಯ್ಯ, ಜೆ.ಪಿ. ನಾರಾಯಣಸ್ವಾಮಿ ಸೇರಿ ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆ ಕಟ್ಟಿ ಬೆಳೆಸಿದ್ದರೂ ಇದರಿಂದ ಅವರಿಗೇನೂ ಲಾಭವಿಲ್ಲ. ಶಾಸಕರಾಗಿ, ಮಂತ್ರಿಗಳಾಗಿ ಕೆಲಸ ಮಾಡಲು ಅವಕಾಶ ಸಿಕ್ಕಿದ ಅವಧಿಯಲ್ಲಿ ನಾವು ಏನು ಸಾಧನೆ ಮಾಡಿದ್ದೇವೆ ಎಂಬುದು ಮುಖ್ಯ' ಎಂದರು.

**ಜಿಲ್ಲೆಗೆ ದೊಡ್ಡ ಆಸ್ತಿ:** 'ಕೇಂದ್ರದ ಮಾಜಿ ಸಚಿವ ಆರ್.ಎಲ್.ಜಾಲಪ್ಪ ಅವರು ಆಸ್ಪತ್ರೆಯನ್ನು ಜಿಲ್ಲೆಗೆ ದೊಡ್ಡ ಆಸ್ತಿಯಾಗಿ ಮಾಡಿದ್ದಾರೆ. ಇಲ್ಲಿ ತೀವ್ರ ನಿಗಾ ಘಟಕವನ್ನು ಎಂಸಿಐ ನಿಯಮಾವಳಿ ಮೀರಿ ಅತ್ಯುತ್ತಮವಾಗಿ ನಿರ್ಮಿಸಲಾಗಿದೆ. ವಿಕ್ಟೋರಿಯಾ, ಬೆಂಗಳೂರು ವೈದ್ಯಕೀಯ ಕಾಲೇಜು, ಮಣಿಪಾಲ ಆಸ್ಪತ್ರೆಯ ಐಸಿಯುಗಿಂತಲೂ ಇಲ್ಲಿನ ಐಸಿಯೂ ಚೆನ್ನಾಗಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ವೈದ್ಯಕೀಯ ಕಾಲೇಜುಗಳು ಹಣ ಗಳಿಸಲು ಸಾಧ್ಯವಿಲ್ಲ. ಪ್ರತಿ ಹಂತದಲ್ಲೂ ನ್ಯಾಯಾಲಯ ಹಾಗೂ ಸರ್ಕಾರದ ಆದೇಶ ಪಾಲಿಸಲೇಬೇಕು. ನೀಟ್ ಪದ್ಧತಿಯಿಂದ ಸುಲಭವಾಗಿ ವೈದ್ಯಕೀಯ ಸೀಟು ಸಿಗುವುದು ಕಷ್ಟವಾಗಿದೆ. ಸಿಬ್ಬಂದಿ ನೇಮಕ ಸಹ ಕಷ್ಟವಾಗಿದೆ' ಎಂದು ಹೇಳಿದರು.

**590 ಕಾಲೇಜು:** 'ದೇಶದಲ್ಲಿ 590 ಮತ್ತು ರಾಜ್ಯದಲ್ಲಿ 57 ವೈದ್ಯಕೀಯ ಕಾಲೇಜುಗಳಿವೆ. ರಾಜ್ಯದಲ್ಲಿ 8 ಡೀಮ್ಡ್ ವಿಶ್ವವಿದ್ಯಾಲಯಗಳು ಹಾಗೂ 1 ರಾಜ್ಯ ವಿ.ವಿ ಇದೆ. ಇಡೀ ದೇಶದಲ್ಲಿ ಶೇ 10ರಷ್ಟು ವೈದ್ಯಕೀಯ ಕಾಲೇಜುಗಳು ನಮ್ಮ ರಾಜ್ಯದಲ್ಲಿವೆ. ಎಂದು ಮಾಹಿತಿ ನೀಡಿದರು.

'ವಿದ್ಯಾರ್ಥಿಗಳು ಪದವಿ ಪಡೆಯುವುದು ಎಷ್ಟು ಕಷ್ಟ ಎಂಬ ಅರಿವು ನನಗಿದೆ. ವಿದ್ಯಾರ್ಥಿ ಹಂತದಲ್ಲೇ ರಾಜಕೀಯ ಆರಂಭಿಸಿ 47ನೇ ವಯಸ್ಸಿನಲ್ಲಿ ಪದವಿ ಪಡೆದುಕೊಂಡೆ. ಶಿಕ್ಷಣ ಕ್ಷೇತ್ರದಲ್ಲಿ ಆಸಕ್ತಿ ಹೆಚ್ಚಿದ್ದ ಕಾರಣ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದ್ದೇನೆ' ಎಂದು ವಿವರಿಸಿದರು.

**ಧ್ವನಿ ಎತ್ತಬೇಕು:** 'ಯಾವುದೇ ಸಂಸ್ಥೆ ನಡೆಸುವುದು ಸುಲಭವಲ್ಲ. ವೈದ್ಯಕೀಯ ಕಾಲೇಜುಗಳ ನಿರ್ವಹಣೆ ಸಂಬಂಧ ಕೇಂದ್ರವು ರೂಪಿಸಿರುವ ಕಾನೂನುಗಳನ್ನು ಸಡಿಲಗೊಳಿಸುವಂತೆ ವೈದ್ಯಕೀಯ ಶಿಕ್ಷಣ ಸಚಿವ ಶಿವಕುಮಾರ್ ಅವರು ಧ್ವನಿ ಎತ್ತಬೇಕು' ಎಂದು ಸಂಸದ ಕೆ.ಎಚ್.ಮುನಿಯಪ್ಪ ಮನವಿ ಮಾಡಿದರು.

'ಕಷ್ಟದ ಪರಿಸ್ಥಿತಿಯಲ್ಲಿ ಆರಂಭವಾದ ದೇವರಾಜ ಅರಸು ವೈದ್ಯಕೀಯ ಕಾಲೇಜು ಹಾಗೂ ಜಾಲಪ್ಪ ಆಸ್ಪತ್ರೆಯು ಬಡ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ನೀಡುತ್ತಿದೆ. ಇದರ ಕೀರ್ತಿ ಜಾಲಪ್ಪ ಅವರಿಗೆ ಸಲ್ಲುತ್ತದೆ. ಜಗತ್ತಿನ ಯಾವುದೇ ದೇಶಕ್ಕೆ ಹೋದರೂ ನಮ್ಮ ದೇಶ ಹಾಗೂ ರಾಜ್ಯದ ವೈದ್ಯರು, ನರ್ಸ್‌ಗಳು ಸೇವೆಯಲ್ಲಿರುವುದನ್ನು ಕಾಣಬಹುದು. ಇದಕ್ಕೆಲ್ಲಾ ವೈದ್ಯಕೀಯ ಕಾಲೇಜುಗಳ ಶ್ರಮವೇ ಕಾರಣ' ಎಂದು ಸ್ಮರಿಸಿದರು.

ಜಾಲಪ್ಪ ಅವರ 94ನೇ ಹುಟ್ಟುಹಬ್ಬದ ಅಂಗವಾಗಿ ಕಾರ್ಯಕ್ರಮಕ್ಕೂ ಮುನ್ನ ಆಸ್ಪತ್ರೆ ದಿನ ಆಚರಿಸಲಾಯಿತು. ಶಾಸಕ ಕೆ.ಶ್ರೀನಿವಾಸಗೌಡ, ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಆರ್.ಎಲ್.ಜಾಲಪ್ಪ, ಕಾರ್ಯದರ್ಶಿ ಜಿ.ಎಚ್.ನಾಗರಾಜ್, ನಿರ್ದೇಶಕ ಜೆ.ರಾಜೇಂದ್ರ, ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದ ಕುಲಪತಿ ಡಾ.ಎಸ್.ಕುಮಾರ್, ಕುಲಸಚಿವ ಎ.ವಿ.ಎಂ.ಕುಟ್ಟಿ, ಪ್ರಾಂಶುಪಾಲ ಡಾ.ಹರೇಂದ್ರಕುಮಾರ್, ವೈದ್ಯಕೀಯ ಸೂಪರಿಂಟೆಂಡೆಂಟ್ ಡಾ.ಲಕ್ಷ್ಮಯ್ಯ, ಬೆಂಗಳೂರಿನ ಕೊಲಂಬಿಯಾ ಏಷ್ಯಾ ಆಸ್ಪತ್ರೆ ಶಸ್ತ್ರಚಿಕಿತ್ಸಕ ಡಾ.ಕೆ.ಅಜಿತ್, ವೈದ್ಯ ಡಾ.ಉಮೇಶ್, ಮಣಿಪಾಲ್ ಆಸ್ಪತ್ರೆ ವೈದ್ಯರಾದ ಡಾ.ಎಸ್.ಸುಂದರ್, ಡಾ.ಸುನಿಲ್ ಕಾರಂತ್ ಪಾಲ್ಗೊಂಡಿದ್ದರು.

> **ಆರೋಗ್ಯ ಕ್ಷೇತ್ರದಲ್ಲಿ ರಾಜ್ಯ ಮತ್ತು ಮಹಾರಾಷ್ಟ್ರ ಪ್ರಥಮ ಸ್ಥಾನದಲ್ಲಿವೆ. ಉತ್ತಮ ವೈದ್ಯರನ್ನು ರೂಪಿಸುವಲ್ಲಿ ಕರ್ನಾಟಕ ಅಗ್ರ ಸ್ಥಾನದಲ್ಲಿದೆ.**
> **-ಡಿ.ಕೆ.ಶಿವಕುಮಾರ್**, ವೈದ್ಯಕೀಯ ಶಿಕ್ಷಣ ಸಚಿವ

**ಮುಖ್ಯಾಂಶಗಳು**

- ಇಷ್ಟ ಬಂದಂತೆ ನಿಯಮಾವಳಿ ರೂಪಿಸಲಾಗಿದೆ
- ನಿಯಮಾವಳಿ ಅನ್ವಯ ಕಾಲೇಜು ನಡೆಸೋದು ಕಷ್ಟ
- ವೈದ್ಯಕೀಯ ಸೀಟು ಸಿಗುವುದು ಕಷ್ಟವಾಗಿದೆ

# ಕರ್ನಾಟಕ ಆರೋಗ್ಯ ಸೇವೆ ದೇಶಕ್ಕೆ ಮಾದರಿ

## ಸಚಿವ ಡಿ.ಕೆ.ಶಿವಕುಮಾರ್ ಮೆಚ್ಚುಗೆ | 45 ಕೋಟಿ ರೂ. ವೆಚ್ಚದ ಐಸಿಯು ಘಟಕ ಲೋಕಾರ್ಪಣೆ

■ ವಿಜಯವಾಣಿ ಸುದ್ದಿಜಾಲ ಕೋಲಾರ

ಆರೋಗ್ಯ ಸೇವೆ ಮತ್ತು ಹೆಲ್ತ್ ಟೂರಿಸಂನಲ್ಲಿ ರಾಜ್ಯ ಮಾದರಿಯಾಗಿದೆ ಎಂದು ವೈದ್ಯಕೀಯ ಶಿಕ್ಷಣ ಮತ್ತು ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ತಿಳಿಸಿದರು.

ನಗರ ಹೊರವಲಯದ ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯಲ್ಲಿ 45 ಕೋಟಿ ರೂ. ವೆಚ್ಚದಲ್ಲಿ ಸ್ಥಾಪಿಸಿರುವ ಸುಸಜ್ಜಿತ ಐಸಿಯು ಘಟಕವನ್ನು ಶುಕ್ರವಾರ ಲೋಕಾರ್ಪಣೆ ಮಾಡಿ ಮಾತನಾಡಿದರು.

ರಾಜ್ಯದಲ್ಲಿ ಗುಣಮಟ್ಟದ ವೈದ್ಯಕೀಯ ಶಿಕ್ಷಣ ನೀಡುತ್ತಿರುವುದರಿಂದ ಇಲ್ಲಿ ಕಲಿತ ವಿದ್ಯಾರ್ಥಿಗಳು ದೇಶ-ವಿದೇಶಗಳಲ್ಲಿ ಉತ್ತಮ ಸೇವೆ ನೀಡುವಂತಾಗಿದೆ ಎಂದರು.

ದೇಶದಲ್ಲಿ ಪ್ರಸ್ತುತ 590 ವೈದ್ಯಕೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಕರ್ನಾಟಕವೊಂದರಲ್ಲೇ 57 ಕಾಲೇಜುಗಳಿವೆ. ದೇಶದಲ್ಲಿ ಹೊರಹೊಮ್ಮುತ್ತಿರುವ ವೈದ್ಯರಲ್ಲಿ ಶೇ.10 ವೈದ್ಯರು ನಮ್ಮ ರಾಜ್ಯದವರೇ ಎಂದು ನುಡಿದರು.

ಪ್ರಾಥಮಿಕ ಶಿಕ್ಷಣ, ಉನ್ನತ ಶಿಕ್ಷಣ ಸಂಸ್ಥೆ ಸ್ಥಾಪಿಸಲು ರಾಜ್ಯದಲ್ಲಿ ಉತ್ತಮ ವಾತಾವರಣವಿದೆ. ಮಾನವ ಸಂಪನ್ಮೂಲ ವಿಚಾರದಲ್ಲೂ ಮುನ್ನಡೆ ಸಾಧಿಸಲಾಗುತ್ತಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರದ ಸಂಸ್ಥಾಪಕ ಆರ್.ಎಲ್.ಜಾಲಪ್ಪ ಅವರ 94ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಅತ್ಯಾಧುನಿಕ ಯಂತ್ರೋಪಕರಣಗಳನ್ನು ಒಳಗೊಂಡ ಐಸಿಯು, ಡಯಾಲಿಸಿಸ್ ಹಾಗೂ ಎಂಡೋಸ್ಕೋಪಿಕ್ ಘಟಕ ಉದ್ಘಾಟನೆಯಾಗಿರುವುದು ಸಂತಸದ ವಿಷಯ. ಸರ್ಕಾರ ಮಾಡಬೇಕಾದ ಕೆಲಸವನ್ನು ಜಾಲಪ್ಪ ತಂಡದೊಂದಿಗೆ ಮಾಡಿದ್ದಾರೆ ಎಂದು ಪ್ರಶಂಸಿಸಿದರು.




ವಿಜಯವಾಣಿ ಚಿತ್ರ

ಕೋಲಾರದ ಶ್ರೀ ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಸುಮಾರು 45 ಕೋಟಿ ರೂಪಾಯಿ ವೆಚ್ಚದ ಸುಸಜ್ಜಿತ ಐಸಿಯು ಘಟಕವನ್ನು ಸಚಿವ ಡಿ.ಕೆ.ಶಿವಕುಮಾರ್ ಲೋಕಾರ್ಪಣೆ ಮಾಡಿದರು.

ಪ್ರಸ್ತುತ ನೂತನ ವೈದ್ಯಕೀಯ ಕಾಲೇಜು ಆರಂಭಿಸುವುದು ಸುಲಭದ ಮಾತಲ್ಲ. ಎಂಸಿಐ (ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ) ಮಾರ್ಗಸೂಚಿಗಳು ಅತ್ಯಂತ ಕಠಿಣವಾಗಿವೆ. ಕನಿಷ್ಠ 10 ಎಕರೆ ಜಮೀನು ಇಲ್ಲದಿದ್ದರೆ ವೈದ್ಯಕೀಯ ಕಾಲೇಜು ಸ್ಥಾಪಿಸಲು ಅನುಮತಿ ಸಿಗುವುದಿಲ್ಲ. ಆದರೆ ಆರ್.ಎಲ್. ಜಾಲಪ್ಪ 85 ಎಕರೆಯಲ್ಲಿ ಕಾಲೇಜು ಮತ್ತು ಆಸ್ಪತ್ರೆ ಸ್ಥಾಪಿಸುವ ಮೂಲಕ ದಾಖಲೆ ನಿರ್ಮಿಸಿದ್ದಾರೆ ಎಂದರು.

> ಹೊಸದಾಗಿ ವೈದ್ಯಕೀಯ ಕಾಲೇಜು ಸ್ಥಾಪಿಸಲು ಕನಿಷ್ಠ 200ರಿಂದ 500 ಕೋಟಿ ರೂ. ಬೇಕಿದೆ. ಕೇಂದ್ರ ಸರ್ಕಾರ ವೈದ್ಯಕೀಯ ಕಾಲೇಜು ಸ್ಥಾಪನೆಗೆ ವಿಧಿಸಿರುವ ನಿರ್ಬಂಧ ಕಠಿಣವಾಗಿರುವುದರಿಂದ ವೈದ್ಯಕೀಯ ಸಚಿವ ಡಿ.ಕೆ.ಶಿವಕುಮಾರ್ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ನಿರ್ಬಂಧನೆ ಸಡಿಲಗೊಳಿಸಬೇಕು.
>
> | ಕೆ.ಎಚ್.ಮುನಿಯಪ್ಪ, ಸಂಸದ

ಎಂಸಿಐ ಮಾರ್ಗಸೂಚಿಗಳು ಕಠಿಣವಾಗಿರುವುದರಿಂದ ಎದೆಗುಂದಬೇಕಾಗಿಲ್ಲ. ರಾಜ್ಯ ಸರ್ಕಾರ ಮತ್ತು ವೈಯಕ್ತಿಕವಾಗಿ ನಾನು ಈ ಸಂಸ್ಥೆಯೊಂದಿಗೆ ಸದಾ ಕಾಲ ಸ್ಪಂದಿಸುವುದಾಗಿ ಭರವಸೆ ನೀಡಿದರು.

ಶಾಸಕ ಕೆ. ಶ್ರೀನಿವಾಸಗೌಡ, ಸಂಸ್ಥೆ ಸಂಸ್ಥಾಪಕ ಆರ್.ಎಲ್. ಜಾಲಪ್ಪ, ಕಾರ್ಯದರ್ಶಿ ಜಿ.ಎಚ್. ನಾಗರಾಜ್, ಕುಲಾಧಿಪತಿ ಡಾ. ಎಸ್. ಕುಮಾರ್, ಕುಲಸಚಿವ ಎ.ಎನ್.ಎಂ.ಕುಟ್ಟಿ, ವೈದ್ಯಕೀಯ ಅಧೀಕ್ಷಕ ಡಾ.ಲಕ್ಷ್ಮಯ್ಯ, ಪ್ರಾಂಶುಪಾಲ ಡಾ.ಹರೇಂದ್ರಕುಮಾರ್, ಮುಖ್ಯ ಅತಿಥಿಗಳಾದ ಡಾ. ಸುನೀಲ್ ಕಾರಂತ್, ಡಾ. ಉಮೇಶ್ ಜಾರಿಹಾಳ್, ಡಾ.ಎಂ. ಎಲ್. ನರೇಂದ್ರಕುಮಾರ್, ಡಾ. ಜೂಡಿಯಸ್ ಪುನಸ್, ಡಾ. ಸುಂದರ್, ಸಂಸ್ಥೆಯ ಆರ್ಥಿಕ ವಿಭಾಗದ ನಿರ್ದೇಶಕ ಜಾಲಪ್ಪ ಪುತ್ರ ಜೆ.ರಾಜೇಂದ್ರ ಇದ್ದರು.

ಸಂಯುಕ್ತ ಕರ್ನಾಟಕ



# ವೈದ್ಯರ ಸೃಷ್ಟಿಯಲ್ಲಿ ಕರ್ನಾಟಕ ನಂ.1



**ಸಂ.ಕ ಸಮಾಚಾರ, ಕೋಲಾರ**

ವಿಶ್ವದಲ್ಲೇ ಅತಿ ಹೆಚ್ಚು ಪ್ರಮಾಣದಲ್ಲಿ ವೈದ್ಯರನ್ನು ಸೃಷ್ಟಿಸುವ ರಾಜ್ಯಗಳೆಂದು ಕರ್ನಾಟಕ ಹಾಗೂ ಮಹಾರಾಷ್ಟ್ರ ಪರಿಗಣಿತವಾಗಿವೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಿ.ಕೆ.ಶಿವಕುಮಾರ್ ಹೇಳಿದರು.

ಶುಕ್ರವಾರ ಸಂಜೆ ಜಾಲಪ್ಪ ಆಸ್ಪತ್ರೆಯಲ್ಲಿ 45ಕೋಟಿರೂ. ವೆಚ್ಚದ ಐಸಿಯು ಹಾಗೂ ಡಯಾಲಿಸಿಸ್ ಘಟಕಗಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ ಆರೋಗ್ಯ ಕ್ಷೇತ್ರದಲ್ಲಿ ದೊಡ್ಡ ಶಕ್ತಿಯನ್ನು ಹೊಂದುವ ನಿಟ್ಟಿನಲ್ಲಿ ಕರ್ನಾಟಕವು ವೈದ್ಯರು ಹಾಗೂ ನರ್ಸಿಂಗ್ ಸಿಬ್ಬಂದಿಯನ್ನು ಸೃಷ್ಟಿಸಿ ದೇಶವಿದೇಶಗಳ ಸೇವೆಗೆ ಒದಗಿಸುತ್ತಿದೆ ಎಂದು ವಿವರಿಸಿದರು.

ವೈದ್ಯಕೀಯ ಕಾಲೇಜು ನಡೆಸಲು ಕೇಂದ್ರ ಸರ್ಕಾರ ಹಾಕಿರುವ ನಿಬಂಧನೆಗಳನ್ನು ಸಡಿಲಗೊಳಿಸಬೇಕು ಎಂದು ಆಗ್ರಹಿಸಿದ ಶಿವಕುಮಾರ್ ಭಾರತೀಯ ವೈದ್ಯಕೀಯ ಮಂಡಳಿ(ಎಂಸಿಐ) ಪ್ರಕಾರ ವೈದ್ಯಕೀಯ ಕಾಲೇಜು ನಡೆಸಲು ಕಷ್ಟವಾಗಿದೆ ಎಂದು ಹೇಳಿದರು.

ಮೆಡಿಕಲ್ ಕಾಲೇಜುಗಳಿಂದ ಹಣಗಳಿಸಲು ಸಾಧ್ಯವಿಲ್ಲ. ಪ್ರತಿ ಹಂತದಲ್ಲಿ ಕಾನೂನು ನೀಟ್ ಪದ್ಧತಿಯಿಂದ ಸುಲಭವಾಗಿ ಮೆಡಿಕಲ್ ಸೀಟ್ ದೊರೆಯುವುದು ಕಷ್ಟವಾಗಿದೆ ಎಂದು ತಿಳಿಸಿದರು.

ಸಂಸದ ಕೆ.ಎಚ್.ಮುನಿಯಪ್ಪ ಮಾತನಾಡಿ ವಿಶ್ವದ ಯಾವುದೇ ದೇಶಕ್ಕೆ ಹೋದರೂ ಭಾರತೀಯ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿ ಇದ್ದಾರೆ ಎಂದು ನುಡಿದರು.

ಯಾವುದೇ ಸಂಸ್ಥೆಯನ್ನು ನಡೆಸೋದು ಸುಲಭವಲ್ಲ. ವೈದ್ಯಕೀಯ ಕಾಲೇಜುಗಳಿಗೆ ಕೇಂದ್ರ ಸರ್ಕಾರ ಹಾಕಿರುವ ಕಾನೂನುಗಳನ್ನು ಸಡಿಲಿಸುವಂತೆ ವೈದ್ಯಕೀಯ ಶಿಕ್ಷಣ ಸಚಿವರು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಬೇಕು ಎಂದು ಮುನಿಯಪ್ಪ ಆಗ್ರಹಿಸಿದರು.

ಶಾಸಕ ಕೆ.ಶ್ರೀನಿವಾಸಗೌಡ, ಅರಸು ವೈದ್ಯಕೀಯ ಕಾಲೇಜು ಸಂಸ್ಥಾಪಕ ಜಾಲಪ್ಪ, ಕಾರ್ಯದರ್ಶಿ ಜಿ.ಎಚ್.ನಾಗರಾಜ್, ಕುಲಪತಿ ಎಸ್.ಕುಮಾರ್, ರಿಜಿಸ್ಟ್ರಾರ್ ಎಸ್. ಕುಟ್ಟಿ, ನಿರ್ದೇಶಕ ರಾಜೇಂದ್ರ ಇದ್ದರು.

ವಿಜಯ ಕರ್ನಾಟಕ



ಆರೋಗ್ಯ ಸೇವೆಯಲ್ಲಿ ದೊಡ್ಡ ಶಕ್ತಿಯಾಗಿ ರಾಜ್ಯ ಹೊರಹೊಮ್ಮಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ

# ಕೌನ್ಸಿಲ್‌ನ ನಿಬಂಧನೆಗಳಿಂದ ಮೆಡಿಕಲ್ ಕಾಲೇಜುಗಳ ನಿರ್ವಹಣೆ ಕಷ್ಟ: ಡಿಕೆಶಿ

**ವಿಕ ಸುದ್ದಿಲೋಕ** ಕೋಲಾರ

ಆರೋಗ್ಯ ಸೇವೆಯಲ್ಲಿ ರಾಜ್ಯವು ದೇಶದ ಅತಿದೊಡ್ಡ ಶಕ್ತಿಯಾಗಿ ಹೊರಹಮ್ಮಿದೆ. ಆದರೆ, ಕೇಂದ್ರ ಸರಕಾರ ಹಾಗೂ ಮೆಡಿಕಲ್ ಕೌನ್ಸಿಲ್ (ಎಂಸಿಐ)ನ ಹಲವು ನಿಬಂಧನೆಗಳಿಂದಾಗಿ ವೈದ್ಯಕೀಯ ಕಾಲೇಜು ನಿರ್ವಹಣೆ ಮಾಡುವುದೆ ಕಷ್ಟವಾಗಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ನಗರದ ಹೊರವಲಯದ ಟಮಕದಲ್ಲಿನ ಶ್ರೀ ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಆರ್.ಎಲ್. ಜಾಲಪ್ಪ ಆಸ್ಪತ್ರೆ, ಸಂಶೋಧನಾ ಕೇಂದ್ರದಲ್ಲಿ ನಿರ್ಮಿಸಿರುವ ತೀವ್ರ ನಿಗಾ ಘಟಕ, ಸುಸಜ್ಜಿತ ಶಸ್ತ್ರಚಿಕಿತ್ಸಾ ಕೊಠಡಿಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಕೋಲಾರ ಹೊರವಲಯದ ಟಮಕದಲ್ಲಿನ ಆರ್.ಎಲ್ ಜಾಲಪ್ಪ ಆಸ್ಪತ್ರೆ, ಸಂಶೋಧನಾ ಕೇಂದ್ರದಲ್ಲಿ ತೀವ್ರನಿಗಾ ಘಟಕ, ಸುಸಜ್ಜಿತ ಶಸ್ತ್ರಚಿಕಿತ್ಸಾ ಕೊಠಡಿಗಳನ್ನು ವೈದ್ಯಕೀಯ ಶಿಕ್ಷಣ ಸಚಿವ ಡಿ.ಕೆ.ಶಿವಕುಮಾರ್ ಉದ್ಘಾಟಿಸಿದ ಸಮಯದಲ್ಲಿ ಸಂಸದ ಕೆ.ಎಚ್. ಮುನಿಯಪ್ಪ ಮತ್ತಿತರರು ಇದ್ದರು.

**ರಾಜ್ಯದಲ್ಲಿ 57 ಮೆಡಿಕಲ್ ಕಾಲೇಜು:** ದೇಶದಲ್ಲಿ 590, ರಾಜ್ಯದಲ್ಲಿ ಸುಮಾರು 57 ವೈದ್ಯಕೀಯ ಕಾಲೇಜುಗಳಿವೆ. ಇದರಲ್ಲಿ 24ಕ್ಕೂ ಹೆಚ್ಚು ಖಾಸಗಿ, 26 ಸರಕಾರಿ, 8 ಸ್ವಾಯತ್ತತೆ ಹೊಂದಿರುವಂತಹವು ಒಳಗೊಂಡಿವೆ. ಶೇ. 10ರಷ್ಟು ಮಂದಿ ವೈದ್ಯರನ್ನು ಕೊಡುಗೆಯಾಗಿ ನೀಡುವಷ್ಟು ಸಂಸ್ಥೆಗಳು ಇಲ್ಲಿವೆ. ಆದರೆ, ಬೆಂಗಳೂರಲ್ಲಿ 10 ಎಕರೆಯಷ್ಟಿರಬೇಕು ಎಂಬಂತ ಮೆಡಿಕಲ್ ಕೌನ್ಸಿಲ್‌ನ ಹಲವು ನಿಬಂಧನೆಗಳಿಂದಾಗಿ, ಈ ಕಾಲೇಜು ಮುನ್ನಡೆಸುವುದು ಕಷ್ಟವಾಗಿದೆ ಎಂದರು.

**ಪ್ರಭಾವಿಗಳಿಗೂ ಸೀಟು ಸಿಗದು:** ಎಷ್ಟೆ ಪ್ರಭಾವಿಗಳಾಗಿದ್ದರೂ ಮೆಡಿಕಲ್ ಕಾಲೇಜುಗಳಲ್ಲಿ ಸೀಟು ಗಿಟ್ಟಿಸಿಕೊಳ್ಳಲು ಸಾಧ್ಯವಿಲ್ಲ, ಅಷ್ಟರ ಮಟ್ಟಿಗೆ ಕಾನೂನು ಕಠಿಣವಾಗಿದೆ ಎಂದು ತಿಳಿಸಿದ ಅವರು, ಹೊರ ರಾಜ್ಯಗಳಲ್ಲಷ್ಟೆ ಅಲ್ಲ, ವಿದೇಶದಲ್ಲೂ, ಕರ್ನಾಟಕದಲ್ಲಿ ಶಿಕ್ಷಣ ಪಡೆದವರಿಂದು ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ರಾಥಮಿಕ ಹಂತದಿಂದ ಉನ್ನತ ಹಂತದವರೆಗೂ ಗುಣಮಟ್ಟದ ಶಿಕ್ಷಣ ನೀಡುತ್ತಿರುವುದು ಇದಕ್ಕೆ ಕಾರಣ ಎಂದು ತಿಳಿಸಿದರು.

ವೈದ್ಯಕೀಯ ಶಿಕ್ಷಣದ ಜತೆಗೆ, ಸಂಶೋಧನೆಗೂ ಆದ್ಯತೆ ನೀಡಿದಾಗ ಮಾತ್ರ, ವೈದ್ಯಕೀಯ ವೃತ್ತಿಯಲ್ಲಿ ಯಶಸ್ವಿಯಾಗಲು ಸಾಧ್ಯ. ಈ ಕುರಿತಂತೆ ವಿದ್ಯಾರ್ಥಿಗಳು ಗಮನ ಹರಿಸಬೇಕು ಎಂದು ಹೇಳಿದರು.

**ಸಂಸತ್‌ನಲ್ಲಿ ಪ್ರಸ್ತಾಪಿಸುವೆ:** ಸಂಸದ ಕೆ.ಎಚ್. ಮುನಿಯಪ್ಪ ಮಾತನಾಡಿ, ಗುಣಮಟ್ಟದ ವೈದ್ಯರನ್ನು ಕೊಡುಗೆಯಾಗಿ ನೀಡುತ್ತಿರುವ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಮೇಲೆ ಹೇರಿರುವ ನಿಬಂಧನೆ ಸಡಿಲಕ್ಕೆ ಸಂಬಂಧಿಸಿದಂತೆ ಸಂಸತ್‌ನಲ್ಲಿ ಪ್ರಸ್ತಾಪಿಸುತ್ತೇನೆ ಎಂದು ಅವರು ತಿಳಿಸಿದರು.

ಸರಕಾರಿ, ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಉತ್ತಮ ವೈದ್ಯರನ್ನು ಸಿದ್ಧಪಡಿಸಿವೆ. ಇಂತಹ ಸಂದರ್ಭದಲ್ಲಿ ಈ ಕಾಲೇಜುಗಳ ಮೇಲೆ ನಿಬಂಧನೆ ಹೇರುವುದು, ಮುಟ್ಟುಗೋಲು ಹಾಕಿಕೊಳ್ಳುವ ಪ್ರಯತ್ನಕ್ಕೆ ಮುಂದಾಗುವುದು ಸರಿಯಲ್ಲ ಎಂದರು.

ಶಾಸಕ ಕೆ.ಶ್ರೀನಿವಾಸಗೌಡ ಮಾತನಾಡಿದರು. ಮಾಜಿ ಕೇಂದ್ರ ಸಚಿವರಾದ ದೇವರಾಜ ಅರಸ್ ಉನ್ನತ ಶಿಕ್ಷಣ, ಸಂಶೋಧನಾ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಆರ್.ಎಲ್. ಜಾಲಪ್ಪ, ಕುಲಾಧಿಪತಿ ಡಾ.ಎಸ್.ಕುಮಾರ್, ಟ್ರಸ್ಟ್‌ನ ಕಾರ್ಯದರ್ಶಿ ಜಿ.ಎಚ್.ನಾಗರಾಜ್, ಸಂಸ್ಥೆಯ ಗಣ್ಯರು, ತಜ್ಞರು ಮತ್ತಿತರರು ಭಾಗವಹಿಸಿದ್ದರು.

> ಮೂಲತಃ ರೈತನಾದ ನಾನು, ರಾಜಕಾರಣಿಯಾಗಿದ್ದೇನೆ. ಶಿಕ್ಷಣದತ್ತ ಹೆಚ್ಚು ಆಸಕ್ತಿ ನೀಡದೇ ಅರ್ಧದಲ್ಲೇ ಕೈಬಿಟ್ಟೆ. ವಿಧಾನಸಭೆಯಲ್ಲಿ ಮಾತನಾಡಲು ಕಷ್ಟಪಡುತ್ತಿದ್ದೆ. ಶಿಕ್ಷಣ ಮಹತ್ವವನ್ನು ಅರಿತು 47 ವರ್ಷ ವಯೋಮಾನಕ್ಕೆ ಡಿಗ್ರಿ ಪೂರ್ಣಗೊಳಿಸಿದೆ.
>
> **ಡಿ.ಕೆ.ಶಿವಕುಮಾರ್**, ವೈದ್ಯಕೀಯ ಶಿಕ್ಷಣ ಸಚಿವ

# Centre should relax norms for medical colleges, says DKS

## ICU inaugurated at Devaraj Urs Medical College in Kolar

**KOLAR: Medical Education Minister D K Shivakumar has said that the Centre should ease the restrictions imposed for running medical colleges.**

Speaking after inaugurating intensive care unit and operation theatre at Devaraj Urs Medical College and Hospital on Friday, Shivakumar said that it would be difficult to run medical colleges according to the regulations of the Medical Council of India.

"The MCI members say that 10 acres is enough for running a medical college in Bengaluru. The rules have been framed at their will as a result of which the managements are finding it extremely difficult to run the colleges," he said.

The minister said that medical colleges have to comply with the government guidelines and the orders of the Supreme Court at every step and hence they cannot make money. He added that securing a medical seat had become difficult with the introduction of the National Eligibility cum Entrance Test (NEET). "Even appointment of staff to medical colleges is a herculean task," he added.



NEW FACILITY: Medical Education Minister D K Shivakumar inaugurated the intensive care unit at Devaraj Urs Medical College in Kolar on Friday. DH PHOTO

Shivakumar said that there were 590 medical colleges in India and 57 in Karnataka. Karnataka has eight deemed universities and one state varsity. Karnataka is home to 10% of the total medical colleges in the country.

He said that Jalappa, Siddaramaiah and J P Narayanaswamy joined hands in building Devaraj Urs Higher Education and Research Institute. Former Union Minister R L Jalappa has been instrumental in developing the hospital as an invaluable asset for the district. "The ICU in this hospital is much more better than that in Victoria hospital, Manipral hospital and Bangalore Medical college," he said.

Lok Sabha member K H Muniyappa sought D K Shivakumar to raise his voice for relaxation of the rules governing functioning of medical colleges. "Devaraj Urs Medical College and Jalappa Hospital was set up in difficult situation. Both the institutions have been rendering yeoman service to the poor and the credit goes to Jalappa, he said.

Ninety-fourth birthday of Jalappa was celebrated on the occasion,. Legislator K Srinivasa Gowda, founder of Devaraj Urs Higher Education and Research Institute, R L Jalappa, secretary G H Nagaraj, director J Rajendra, chancellor of Devaraj Urs College of Medical Education Dr S Kumar, registrar A V M Kutty and others were present on the occasion.

**DH News Service**